## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ದಿನಾಂಕ:17.03.2016ರಂದು ನಡೆದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯ ನಡವಳಿಗಳ ವಿಷಯ ಸಂಖ್ಯೆ:14ರ ನಿರ್ಣಯವನ್ನು ಹಿಂಪಡೆಯುವ ಕುರಿತು.

**ಓದಲಾಗಿದೆ:**

1. ದಿನಾಂಕ:17.03.2016ರಂದು ನಡೆದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯ ನಡವಳಿಗಳ ಸಂಖ್ಯೆ:ಗ್ರಾಅಪ 1246 ಗ್ರಾಕುನೀ&ನೈಇ 2015 ದಿನಾಂಕ:06.04.2016.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆದೇಶ ಕಡತದ ಟಿಪ್ಪಣಿ ಸಂ:ಗ್ರಾಅಪ 918 ಗ್ರಾಕುನೀ&ನೈಇ 2015 ದಿನಾಂಕ:12.05.2016.

---

**ಪೀಠಿಕೆ:**

ದಿನಾಂಕ:17.03.2016ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ (Tender Accepting Authority) ಸಭೆಯಲ್ಲಿ ಪ್ರಯೋಗಾಲಯಗಳು–Establishment of 46 nos. Sub-Divisional Water Quality Testing Laboratories including Supply, Installation of the Laboratory Equipments, Maintenance of Lab., Collection of Water samples, Analysis of samples and supply of Consumables, Preparation and submission of reports across Karnataka State on Turn key basis ಕಾಮಗಾರಿ ವಿಷಯ ಸಂಖ್ಯೆ:14ರಲ್ಲಿ ಮಂಡಿಸಲಾಗಿತ್ತು.

ಸದರಿ TAA ಸಭೆಯ ನಡವಳಿಯಲ್ಲಿ "Establishment of 46 nos. Sub-Divisional Water Quality Testing Laboratories ಕಾಮಗಾರಿಗೆ ಅತೀ ಕಡಿಮೆ ದರ ನಮೂದಿಸಿರುವ ಮೆ. Ray Environ (ಶ್ರೀ ಪ್ರಸಾದ್ ರಾಯಪಾಟಿ), ಬೆಂಗಳೂರು ರವರ ಸಂಧಾನಿತ ಟೆಂಡರ್ ಮೊತ್ತ ರೂ.7145.00ಲಕ್ಷಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ (+)1.56% ಹೆಚ್ಚು ದರದ ಟೆಂಡರನ್ನು ಅನುಮೋದಿಸಲು ಸಮಿತಿಯು ಒಪ್ಪಿದೆ" ಎಂದು ನಿರ್ಣಯವಾಗಿದೆ. ಮೇಲೆ (2)ರಲ್ಲಿ ಓದಲಾದ ಕಡತದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ವಿಷಯಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಲು ಸೂಚಿಸಿರುವುದರಿಂದ ದಿನಾಂಕ:17.03.2016ರ ಟೆಂಡರ್ ಅಂಗೀಕರಿಸುವ ಪ್ರಾಧಿಕಾರದ ನಡವಳಿಗಳ ವಿಷಯ ಸಂಖ್ಯೆ:14ರ ನಿರ್ಣಯವನ್ನು ಹಿಂಪಡೆಯಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 03 ಗ್ರಾನೀಸ(5)2015 ಬೆಂಗಳೂರು, ದಿನಾಂಕ:05.07.2016.**

ಪೀಠಿಕೆಯಲ್ಲಿನ ವಾಸ್ತಾಂಶಗಳ ಹಿನ್ನೆಲೆಯಲ್ಲಿ, ದಿನಾಂಕ:17.03.2016ರಂದು ನಡೆದ ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಸಭೆಯ ನಡವಳಿಗಳ ಪ್ರಯೋಗಾಲಯಕ್ಕೆ ಸಂಬಂಧಿಸಿದ ವಿಷಯ ಸಂಖ್ಯೆ:14ರ ಸಲುವಾಗಿ ಕೈಗೊಂಡಿರುವ "Establishment of 46 nos. Sub-Divisional Water Quality Testing Laboratories ಕಾಮಗಾರಿಗೆ ಅತೀ ಕಡಿಮೆ ದರ ನಮೂದಿಸಿರುವ ಮೆ. Ray Environ (ಶ್ರೀ ಪ್ರಸಾದ್ ರಾಯಪಾಟಿ), ಬೆಂಗಳೂರು ರವರ ಸಂಧಾನಿತ ಟೆಂಡರ್ ಮೊತ್ತ ರೂ.7145.00 ಲಕ್ಷಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ (+)1.56% ಹೆಚ್ಚು ದರದ ಟೆಂಡರನ್ನು ಅನುಮೋದಿಸಲು ಸಮಿತಿಯು ಒಪ್ಪಿದೆ" ಎಂಬ ನಿರ್ಣಯವನ್ನು ಹಿಂಪಡೆಯಲಾಗಿದೆ.

2. ಈ ಆದೇಶವು ಇಂದಿನಿಂದ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

3. ಸದರಿ ಆದೇಶದ ಕ್ರಮವನ್ನು ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ(SLSSC) ಮತ್ತು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ (TAA) ಸಭೆಗಳಲ್ಲಿ ಮಂಡಿಸಿ ಘಟನೋತ್ತರ ಮಂಜೂರಾತಿ ಪಡೆಯಲು ಮುಖ್ಯ ಇಂಜಿನಿಯರ್, RDWSD ರವರು ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು :**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು–2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು.
11. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂ–09.
12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
13. ಮುಖ್ಯ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂ–9.
14. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
15. ಮುಖ್ಯ ಲೆಕ್ಕಾಧಿಕಾರಿ, RDWSD ಬೆಂಗಳೂರು
16. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
17. ಆಯುಕ್ತರು, RDWSD / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
18. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
19. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
20. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
21. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
22. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
23. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.